ಕಮ್ಯುನಿಸ್ಟ್ ಐಡಿಯಾಲಜಿಗೆ ರಾಷ್ಟ್ರೀಯತಾವಾದಿ ಜಾನಪದ ಆಚರಣೆಗಳು ಅಪಾಯಕಾರಿ ಎಂದು ಪರಿಗಣಿಸಲಾಗಿತ್ತು. ಹಾಗಾಗಿ ಬಹಳಷ್ಟು ಸಾಂಸ್ಕೃತಿಕ ಪರಂಪರೆಗಳು ನಾಶವಾದವು. ಆದರೆ ಉಕ್ರೇನ್ ಸ್ವತಂತ್ರವಾದ ನಂತರ, ಒಂದು ಬಲವಾದ ಸಾಂಸ್ಕೃತಿಕ ಪುನರುಜ್ಜೀವನವು ಆರಂಭವಾಯಿತು. ಇದು 2014ರ ನಂತರವೂ, ಅಂದರೆ Russo-Ukrainian ಯುದ್ಧದ ಸಮಯದಲ್ಲಿ ಮತ್ತು ಅದರ ಹೊರತಾಗಿಯೂ ಮುಂದುವರಿಯುತ್ತಿದೆ.

◆ ನೀವು ಕವಿತೆ ಬರೆಯಲು ಆರಂಭಿಸಿದ್ದು ಹೇಗೆ ?

ನನ್ನ ಕಾವ್ಯಯಾನ ಶುರುವಾದದ್ದು ಅಕ್ಷರ ರೂಪದಲ್ಲಲ್ಲ. ನಾನೊಂದು ಮೌಖಿಕ ಪ್ರತಿಭೆ. ಮಾತನಾಡಲು ಕಲಿತಾಗಿನಿಂದಲೂ ನಾನು ಪ್ರಾಸಬದ್ಧವಾಗಿ ಕವಿತೆ ಮತ್ತು ಹಾಡುಗಳನ್ನು ಗುನುಗುತ್ತಿದ್ದೆನಂತೆ. ನನ್ನಮ್ಮ ನಾನು ಹಾಡುತ್ತಿದ್ದ ಆ ಬಾಲಿಶ ಸಾಲುಗಳನ್ನು ಪುಸ್ತಕವೊಂದರಲ್ಲಿ ಬರೆದಿಟ್ಟದ್ದಳು. ಬರೆಯಲು ಕಲಿತ ತಕ್ಷಣ, ನಾನು ರಚಿಸುತ್ತಿದ್ದ ಪದ್ಯಗಳನ್ನು ನಾನೇ ಬರೆದಿಡಲು ಶುರು ಮಾಡಿದೆ. ನನ್ನ ಹತ್ತಿರ ಇನ್ನೂ ಆ ಪ್ರಾಸ ಪದ್ಯಗಳು ಹಾಗೆ ಇವೆ. ಆಗ ನಾನು ಅಕ್ಷರಗಳನ್ನು ಸರಿಯಾಗಿ ಬರೆಯುವ ಬದಲು ಅಂಕುಡೊಂಕಾಗಿ ಗೀಚುತ್ತಿದ್ದೆ, ಕೆಲವು ಅಕ್ಷರಗಳನ್ನು ಉಲ್ಟಾ ಬರೆಯುತ್ತಿದ್ದೆ. ನಾನು ಬೆಳೆಯುತ್ತಿದ್ದಂತೆ, ನನ್ನ ಬಾಲ್ಯ ಕಾಲದ ಪದ್ಯಗಳು ಕೆಲವು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾದವು. ಇದು ನನ್ನ ಅಮ್ಮನಿಗೆ ಬಹಳ ಹೆಮ್ಮೆಯ ವಿಷಯವಾಯಿತು. ಅವಳು ಆ ಪದ್ಯಗಳನ್ನು ಕತ್ತರಿಸಿ ಒಂದು ವಿಶೇಷ ಫೋಲ್ಡರಲ್ಲಿ ಜೋಪಾನವಾಗಿ ಇಟ್ಟುಕೊಳ್ಳುತ್ತಿದ್ದಳು. ನಾನು ಹದಿಹರೆಯಕ್ಕೆ ಬಂದಾಗ, ಕವಿಯಾಗಿ ನನ್ನ ದನಿ ಮತ್ತು ದೃಷ್ಟಿ ಪಕ್ವಗೊಂಡಂತೆ, ನನ್ನದೇ ಆದ ಶೈಲಿ ಆಕಾರ ಪಡೆಯತೊಡಗಿತು. 20ನೇ ವಯಸ್ಸಿಗೆ ತಲುಪುವ ಹೊತ್ತಿಗೆ, ಹೊಸತನವನ್ನು ಉಳಿಸಿಕೊಂಡು ನಾನು ಬಾಲ ಕವಿಯಿಂದ ನಿಜವಾದ ಕವಿ ಆಗಿ ರೂಪುಗೊಂಡಿದ್ದೆ. ಯೂನಿವರ್ಸಿಟಿಯಲ್ಲಿ ನಾನು ವಿದ್ಯಾರ್ಥಿಗಳೇ ನಡೆಸುತ್ತಿದ್ದ ಅನೌಪಚಾರಿಕ ಕಾವ್ಯ ಗುಂಪಿಗೆ ಸೇರಿಕೊಂಡೆ. ಬೇರೆ ಬೇರೆ ಯುವ ಕವಿಗಳನ್ನು ಭೇಟಿ ಮಾಡಿದೆ. ಕಾವ್ಯವಾಚನಗಳಲ್ಲಿ ಭಾಗವಹಿಸಲು ಶುರು ಮಾಡಿದೆ ಮತ್ತು ನನ್ನ ಪದ್ಯಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಿದೆ. ಕಾಲಕ್ರಮೇಣ ಉಕ್ರೇನಿನ ಒಂದು ಮುಖ್ಯವಾದ ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಗೆದ್ದೆ. 2011ರಲ್ಲಿ ನನ್ನ ಮೊದಲ ಪುಸ್ತಕ ಪ್ರಕಟವಾಯಿತು. ನನಗಾಗ 25 ವರ್ಷ ವಯಸ್ಸು.

◆ ನಿಮ್ಮ ಇಷ್ಟದ ಕವಿ, ಲೇಖಕರು ಯಾರು? ಅವರ ಒಂದೆರಡು ಕೃತಿಗಳನ್ನು ಹೆಸರಿಸಬಹುದಾ?

ನಾನು ಇತ್ತೀಚೆಗೆ ಹೆಚ್ಚೆಚ್ಚು ಚೈನೀಸ್ ಸಾಹಿತ್ಯವನ್ನು ಓದ್ತಾ ಇದ್ದೀನಿ. 2019ರಿಂದ 2023ರ ನಡುವೆ ಮೂರು ವರ್ಷಗಳ ಕಾಲ ನಾನು ಚೈನಾದಲ್ಲಿದ್ದು ಕೆಲಸ ಮಾಡಿದ್ದೆ. ನಿಧಾನವಾಗಿ ಆ ಪ್ರಾಚೀನ ಭಾಷೆಯನ್ನು ಕಲಿಯಲು ಶುರು ಮಾಡಿದೆ. ಈಗ ನಾನು ಸಿನಾಫೋನ್ ಸಾಹಿತ್ಯವನ್ನು ಇಂಗ್ಲಿಷ್ ಅನುವಾದದಲ್ಲಿ ಓದಿ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಕವಿಗಳಾದ Ruan Ji ಮತ್ತು Xi Kang ಮತ್ತವರ ಕವಿತೆಗಳು ನನ್ನ ಇತ್ತೀಚಿನ ಹುಡುಕಾಟದ ಫಲ. ಈ ಕವಿಗಳು 3ನೇ ಶತಮಾನಕ್ಕೆ ಸೇರಿದವರು. ಅವರು ಆಗ ಬದುಕಿದ್ದ ಪ್ರದೇಶವನ್ನು ಈಗ ಚೀನಾವೆಂದು ಕರೆಯುತ್ತಾರೆ. ಅವರಿಬ್ಬರಿಗೂ Taoism ಮೇಲೆ ಬಹಳ ಆಸಕ್ತಿ ಇತ್ತು (ಈ ಆಸಕ್ತಿ ನನಗೂ ಇದೆ) ಮತ್ತು ಅವರಿಬ್ಬರ ನಡುವೆ ಕೇವಲ ಗೆಳೆತನಕ್ಕಿಂತ ಹೆಚ್ಚಿನ ಬಂಧ ಇದ್ದಿರಬಹುದು. Xi Kang ಒಬ್ಬ ಅದ್ಭುತ ಸಂಗೀತಗಾರ ಕೂಡ ಆಗಿದ್ದ. ಅವನು guqin ಎಂಬ ಒಂದು ಸಾಂಪ್ರದಾಯಿಕ ತಂತಿ ವಾದ್ಯಕ್ಕಾಗಿ ರಚಿಸಿದ ರಾಗಗಳಲ್ಲಿ ಕನಿಷ್ಠ ಒಂದು ಇಂದಿಗೂ ಉಳಿದು ಬಂದಿದೆ ಅಂತ ಹೇಳ್ತಾರೆ. Ruan Ji ಅವರ "Singing My Cares" ಕವಿತಾ ಸರಣಿ ಎರಡು ಸಾವಿರ ವರುಷಗಳ ನಂತರವೂ ಓದುಗರ ಮನಸ್ಸನ್ನು ಮುಟ್ಟುತ್ತದೆ ಮತ್ತು Xi Kang ಅವರ 'Poems Presented to my Elder Brother on his Entry into the Army' ಮನುಷ್ಯ ಮನುಷ್ಯರ ನಡುವೆ ಬೇರ್ಪಡುವ ಅನಿವಾರ್ಯತೆ ಮತ್ತು ಕೂಡುವ ಹಂಬಲದ ಬಗೆಗಿನ ಸುಂದರವಾದ ಮನೋಚಿತ್ರಣಗಳಾಗಿವೆ.

ಗದ್ಯದ ಬಗ್ಗೆ ಹೇಳುವುದಾದರೆ, ಅಮೆರಿಕನ್ ಸಾಹಿತ್ಯದ Southern Gothic ಅಂದ್ರೆ ನನಗೆ ತುಂಬಾ ಇಷ್ಟ. ನನ್ನ ಆಸಕ್ತಿ ಸಿನಿಮಾ